# 15

# ಪವಿತ್ರಾತ್ಮನು ಯೇಸುವನ್ನು ಮಹಿಮೆ ಪಡಿಸುವ ವಿಧಾನ

## (ಯೋಹಾನ 16)

*"ಆತನು ನನ್ನದರೊಳಗಿಂದ ತೆಗೆದುಕೊಂಡು ನಿಮಗೆ ತಿಳಿಸುತ್ತಾ ನನ್ನನ್ನೇ ಮಹಿಮೆಪಡಿಸುವನು. ತಂದೆಗೆ ಇರುವದೆಲ್ಲಾ ನನ್ನದು; ಆದದರಿಂದಲೇ ನನ್ನದರೊಳಗಿಂದ ತೆಗೆದುಕೊಂಡು ನಿಮಗೆ ತಿಳಿಸುವನೆಂದು ಹೇಳಿದೆನು" (ಯೋಹಾನ 14, 15).*

ಮೇಲುಪ್ಪರಿಗೆಯಲ್ಲಿ ಯೇಸು ಅಪೊಸ್ತಲರೊಂದಿಗೆ ನಡೆಸಿದ ಚರ್ಚೆಯಲ್ಲಿ ತಾನು ಹೊರಟು ಹೋದ ಅಲ್ಪ ಸಮಯದಲ್ಲಿಯೇ ತಾನು ವಾಗ್ದಾನ ಮಾಡಿದ್ದ ಪವಿತ್ರಾತ್ಮನು ಬರುವನು ಎಂದು ಹೇಳಿದ್ದನು. ಯೋಹಾನ 16ರಂತೆ ಪವಿತ್ರಾತ್ಮನ ಪ್ರಸನ್ನತೆಯ ಮುಖಾಂತರ ಮೂರು ಸಂಗತಿಗಳು ಉಂಟಾಗುತ್ತಿದ್ದವು. ಮೊದಲನೆಯದಾಗಿ, ಆತನು ಯೇಸುವಿನ ಸೇವೆಯನ್ನು ಲೋಕಕ್ಕೆ ಮನವರಿಕೆ ಮಾಡುತ್ತಿದ್ದನು (ವಚನಗಳು 8-11). ಎರಡನೆಯದಾಗಿ, ಅಪೊಸ್ತಲರ ಮೂಲಕ ಪ್ರಪಂಚದಾದ್ಯಂತ ಸುವಾರ್ತಸೇವೆಗೆ ಮಾರ್ಗದರ್ಶನ ನೀಡುತ್ತಿದ್ದನು (ವಚನ 13). ಮೂರನೆಯದಾಗಿ, ಆತನು ಯೇಸುವನ್ನೆ ಮಹಿಮೆಪಡಿಸುತ್ತಿದ್ದನು (ವಚನಗಳು 14, 15).

ಯೇಸುವನ್ನು ಮಹಿಮೆಪಡಿಸು ಎಂದರೆ, ಯೇಸುವಿನ ಒಳ್ಳೇಯತನ, ದೈವತ್ವ, ಹಾಗೂ ಆತನಲ್ಲಿರುವ ರಕ್ಷಿಸುವ ಸ್ವಭಾವವನ್ನು ತಿಳಿಯಪಡಿಸುವದೇ ಆಗಿದೆ. ಪವಿತ್ರಾತ್ಮನು ಪರೋಕ್ಷವಾಗಿ ಕ್ರಿಸ್ತನಿಗೆ ಪ್ರಭಾವ ಸ್ತುತಿ, ಹಾಗೂ ಮಹಿಮೆಯನ್ನು ಪ್ರಕಟಿಸಿದನು. ತನ್ನನ್ನೇ ಮಹಿಮೆ ಪಡಿಸಿಕೊಳ್ಳಲು ಆತ್ಮನನ್ನು ಕಳುಹಿಸದೆ, ಕ್ರಿಸ್ತನೇ ಲೋಕಕ್ಕೆ ರಕ್ಷಣೆಯನ್ನು ತರುವವನು ಎಂದು ಅಪೊಸ್ತಲರಿಗೂ ಹಾಗೂ ಲೋಕಕ್ಕೂ ತಿಳಿಸಲು ಆತ್ಮನನ್ನು ಕಳುಹಿಸಲಾಯಿತು.

ಆತ್ಮನು ಕ್ರಿಸ್ತನನ್ನು ಮಹಿಮೆಪಡಿಸುವನು ಎಂದು ಈ ಚರ್ಚೆಯಲ್ಲಿ ತರ್ಕಮಾಡಲಾಯಿತು (ವಚನಗಳು 14, 15).

### ಆತನ ಕುರಿತಾದ ಮಾತು

*ಆತ್ಮನು ತನ್ನ ಮಾತಿನ ಪ್ರಕಟನೆಯ ಮೂಲಕ, ಯೇಸುವನ್ನೇ ಮಹಿಮೆ ಪಡಿಸುವನು ಎಂದು ಯೇಸು ಹೇಳಿದನು.* "ಆತನು ನನ್ನಿಂದ ತೆಗೆದುಕೊಂಡು ..." ಕ್ರಿಸ್ತನು ಮಾಡಿದ ಸಂಗತಿಗಳನ್ನು ಕಟ್ಟುವನು - ಆತನ ಬೋಧನೆ, ಸೇವೆ, ಮರಣ, ಕಾರ್ಯ ಆತನು ಮಾಡಿದನು.

ನಂತರದಲ್ಲಿ ಯೇಸುವಿನ ಹಿಂಬಾಲಕರು "*ಕ್ರೈಸ್ತ*-ರೆಂದು" ಕರೆಯಲ್ಪಟ್ಟರು (ನೋಡಿ ಅಪೊಸ್ತಲರ ಕೃತ್ಯಗಳು 11:26). ಲೋಕವನ್ನು ನಿತ್ಯತ್ವಕ್ಕೆ ಸೇರಿಸಲು ದೇವರು ಕ್ರಿಸ್ತನನ್ನು ಕಳುಹಿಸಿದನು. ಯಾಕೆಂದರೆ ಯೇಸು ತಂದೆಗೆ ವಿಧೇಯನಾಗಿ ಮರಣವನ್ನು ಹೊಂದಿ, ನಂತರ ಆತನು ಮಹಿಮೆ ಹೊಂದಿದಾಗ, ಕ್ರೈಸ್ತರು ಆತನನ್ನು "ಪ್ರಭು" ಎಂದು ಕರೆದರು ಪೌಲನು ಇದನ್ನು ಕುರಿತು:

ಈ ಕಾರಣದಿಂದ ದೇವರು ಆತನನ್ನು ಅತ್ಯುನ್ನತ ಸ್ಥಾನಕ್ಕೆ ಏರಿಸಿ ಎಲ್ಲಾ

ಹೆಸರುಗಳಿಗಿಂತ ಶ್ರೇಷ್ಠವಾದ ಹೆಸರನ್ನು ಆತನಿಗೆ ದಯಪಾಲಿಸಿದ್ದಾನೆ. ಆದ್ದರಿಂದ ಸ್ವರ್ಗ ಮರ್ತ್ಯಪಾತಾಳಗಳಲ್ಲಿರುವವರೆಲ್ಲರೂ ಯೇಸುವಿನ ಹೆಸರಿನಲ್ಲಿ ಅಡ್ಡಬಿದ್ದು ಯೇಸು ಕ್ರಿಸ್ತನನ್ನು ಒಡೆಯನೆಂದು ಪ್ರತಿಜ್ಞೆಮಾಡಿ ತಂದೆಯಾದ ದೇವರಿಗೆ ಘನವನ್ನು ಸಲ್ಲಿಸುವರು (ಫಿಲಿಪ್ಪಿ 2:9-11).

ಯೇಸು ಸಾಧಿಸಿದ ನಿತ್ಯವಾದ ಕಾರ್ಯಗಳನ್ನು ಪವಿತ್ರಾತ್ಮನು ಪ್ರಕಟಿಸುವನು ಇದು ಪವಿತ್ರಾತ್ಮನ ಕಾರ್ಯವೇ ಆಗಿದೆ.

## ಆತನು ನೀಡಿದ ವಿವರಣೆ

*ಇದರ ಸಂಗಡ, ಯೇಸು ಮಾಡಿದ ಸಂಗತಿಗಳ ವಿವರಣೆಯನ್ನು ಆತ್ಮನು ಪ್ರಕಟಿಸುವನು ಎಂದು ಯೇಸು ಹೇಳಿದನು.* "ಆತನು ನನ್ನದರೊಳಗಿಂದ ತೆಗೆದುಕೊಂಡು ನಿಮಗೆ ತಿಳಿಸುತ್ತಾ ನನ್ನನ್ನೇ ಮಹಿಮೆಪಡಿಸುವನು" (16:14). ಯೇಸು ಹೊರಟು ಹೋಗುವ ಸಂದರ್ಭದಲ್ಲಿ, ಆತನ ರಾಜ್ಯದ ಸೇವೆಯ ಕುರಿತು ಅಪೊಸ್ತಲರಲ್ಲಿ ಯಾವುದೇ ಸ್ಪಷ್ಟತೆಯು ಇರಲಿಲ್ಲ. ಅದರ ಬಗ್ಗೆ ಯೇಸು ಮಾತನಾಡಿರುವದನ್ನು ಅವರು ಕೇಳಿದ್ದರು. ಅದನ್ನು ಆತ್ಮನು ಸಲಿಪಡಿಸಿ ನೆರವೇರಿಸುವನು ಎಂಬ ತಿಳುವಳಿಕೆಯನ್ನು ಅವರು ಹೊಂದಿರಲಿಲ್ಲ. ಆತನು ಪರಲೋಕಕ್ಕೆ ಏರಿ ಹೋಗುವ ಸಂದರ್ಭದಲ್ಲೂ ಸಹ ಅವರು ದೇವರ ರಾಜ್ಯದ ವಿಚಾರವನ್ನು ತಿಳಿಯದೇ ಇರಬಹುದು (ಅಪೊಸ್ತಲರ ಕೃತ್ಯಗಳು 1:7, 8). ಯೇಸು ಮಾಡಿದ್ದ ಕಾರ್ಯಗಳನ್ನು ಅವರ ನೆನಪಿಗೆ ತರುವದರ ಮೂಲಕ "ಈ ವಿಷಯಗಳ ಕುರಿತ ಆಳವಾದ ಸಂಗತಿಗಳನ್ನು" ಆತ್ಮನು ಬಯಲು ಮಾಡುತ್ತಿದ್ದನು. "ಬಯಲು" ಎಂದರೆ ಗ್ರೀಕ್‌ನಲ್ಲಿ (ಅನಾನ್‌ಜೇರೋ) "ವಿಷಯಗಳ ಪ್ರಕಟನೆ" ಎಂಬ ಅರ್ಥವಾಗಿದೆ.

ಪವಿತ್ರಾತ್ಮನು ತಾನೇ ಅವರಿಗೆ ಸಹಾಯಕನಾಗಿದ್ದನು (14:26), ಅವರನ್ನು ಸತ್ಯದಲ್ಲಿ ನಡೆಸಿ, ಅವರು ಈಗಾಗಲೇ ತಿಳಿದಿದ್ದ ವಿಚಾರಗಳನ್ನು ಅವರ ನೆನಪಿಗೆ ತರುತ್ತಿದ್ದನು. ದೇವರ ಯೋಜನೆಯಲ್ಲೂ, ಹಾಗೂ ಅಪೊಸ್ತಲರಲ್ಲೂ, ಯೇಸುವಿನ ಕಾರ್ಯಗಳನ್ನೇ ಪ್ರಧಾನ ಮಾಡುತ್ತಿದ್ದನು.

## ಆತನ ಮಹತ್ವ

*ಯೇಸುವನ್ನೇ ಮಹತ್ವ ಪಡಿಸುವ ಮೂಲಕ ಆತ್ಮನು ಆತನನ್ನು ಮಹಿಮೆ ಪಡಿಸಿದನು.* ಯೇಸು ಅಪೊಸ್ತಲರಿಗೆ, "ತಂದೆಗೆ ಇರುವದೆಲ್ಲಾ ನನ್ನದು; ಆದದರಿಂದಲೇ ನನ್ನದರೊಳಗಿಂದ ತೆಗೆದುಕೊಂಡು ನಿಮಗೆ ತಿಳಿಸುವೆನೆಂದು ಹೇಳಿದನು" (16:15). ಯೇಸು ದೇವರ ಚಿತ್ತವನ್ನು ಕಾರ್ಯರೂಪಕ್ಕೆ ತಂದನು, ಅದು ದೇವರ ಹೃದಯದಲ್ಲಿದ್ದ ಯೋಜನೆಯಾಗಿತ್ತು. "ಯೇಸುವಿನಲ್ಲಿ ದೇವರ ಸಂಪೂರ್ಣತೆಯು ಹುದುಗಿತ್ತು" (ಎಫೆಸ 3:19). ಆತನಲ್ಲಿ "ಜನರು ಸಂಪೂರ್ಣರಾಗುತ್ತಿದ್ದರು. ಆತನೇ ಸರ್ವಾಧಿಕಾರಿ" (ಕೊಲೊಸ್ಸೆ 2:10). ದೇವರ ಸಂಪೂರ್ಣತೆಯ ಪ್ರತಿನಿಧಿಯಾಗಿ ಯೇಸು ಲೋಕಕ್ಕೆ ಬಂದನು, "ನೀವು ಆತನಲ್ಲಿದ್ದುಕೊಂಡೇ ಪರಿಪೂರ್ಣತೆಯನ್ನು ಹೊಂದಿದ್ದೀರಿ" (ಎಫೆಸ 2:9).

ತಂದೆಯಿಂದ ಹೊಂದಿದ್ದನ್ನೇ ಯೇಸು ಮಾನವರಿಗೆ ನೀಡಿದನು. ಯೇಸುವಿನ ಸಂಗಡ ಇದ್ದವರು ಯೇಸುವಿನಲ್ಲಿದ್ದ ತಂದೆಯ ಸ್ವಭಾವವನ್ನು ಅರಿತಿದ್ದರು (ಯೋಹಾನ 14:9), ಹಾಗೂ ಆತನಲ್ಲಿದ್ದ ತಂದೆಯ ದೈವೀಕ ಚಿತ್ತವನ್ನು ಕಂಡಿದ್ದರು. ಆತನು ಮಾನವ ರೂಪವನ್ನು ಹೊಂದಿದ್ದರಿಂದ, ಮಾನವರ ಸ್ಥಿತಿಯನ್ನು ಅರಿತುಕೊಂಡನು (ಇಬ್ರಿಯ 10:7).

## ಮುಕ್ತಾಯ

ಯೇಸುವಿನ ಸಾಧನೆಯನ್ನು ಒತ್ತಿ ಹೇಳಿ, ಆತ್ಮನು ಆತನನ್ನು ಮಹಿಮೆ ಪಡಿಸಿದನು

ಹಾಗೂ ಯೇಸು ಈ ಲೋಕದಲ್ಲಿರುವಾಗ ತಿಳಿಸಿದ ವಿಚಾರಗಳನ್ನೆಲ್ಲಾ ನಿವಾರಣೆ ಮಾಡಿದನು. ದೇವರ ಯೋಜನೆಗಳು ಹಾಗೂ ಉದ್ದೇಶಗಳನ್ನು ಈಡೇರಿಸುವಲ್ಲಿ ತಂದೆ ಹಾಗೂ ಮಗನು ಒಂದಾಗಿದ್ದರಿಂದ, ಆತ್ಮನು ಯೇಸುವನ್ನು ಮಹಿಮೆಪಡಿಸಿದನು.

---

*"ಆಗ ಅವರೆಲ್ಲರು ಪವಿತ್ರಾತ್ಮಭರಿತರಾಗಿ ಆ ಆತ್ಮ ತಮತಮಗೆ ನುಡಿಯುವ ಶಕ್ತಿಯನ್ನು ಕೊಡುವ ಪ್ರಕಾರ ಬೇರೆಬೇರೆ ಭಾಷೆಗಳಿಂದ ಮಾತಾಡುವದಕ್ಕೆ ಪ್ರಾರಂಭಿಸಿದರು.*

*"ಆಕಾಶದ ಕೆಳಗಿರುವ ಎಲ್ಲಾ ದೇಶದವರೊಳಗಿಂದ ಬಂದ ಸದ್ಭಕ್ತರಾದ ಯೆಹೂದ್ಯರು ಯೆರೂಸಲೇಮಿನಲ್ಲಿ ವಾಸವಾಗಿದ್ದರು. ಆ ಸಪ್ಪಳವಾದಾಗ ಜನರು ಗುಂಪು ಗುಂಪಾಗಿ ಕೂಡಿಬಂದು ಪ್ರತಿಯೊಬ್ಬರು ತಮ್ಮ ತಮ್ಮ ಭಾಷೆಯಲ್ಲೇ ಇವರು ಮಾತಾಡುವದನ್ನು ಕೇಳಿ ಭ್ರಮೆಗೊಂಡರು" (ಅಪೊಸ್ತಲರ ಕೃತ್ಯಗಳು 2:4-6).*

*"ಆದದರಿಂದ ನೀವು ಶಿಲುಬೆಗೆ ಹಾಕಿಸಿದ ಈ ಯೇಸುವನ್ನೇ ದೇವರು ಒಡೆಯನನ್ನಾಗಿಯೂ ಕ್ರಿಸ್ತನನ್ನಾಗಿಯೂ ಮಾಡಿದ್ದಾನೆಂಬುದು ಇಸ್ರಾಯೇಲ್ ಕುಲದವರಿಗೆಲ್ಲಾ ನಿಸ್ಸಂದೇಹವಾಗಿ ತಿಳಿದಿರಲಿ ಎಂದು ಹೇಳಿದನು" (ಅಪೊಸ್ತಲರ ಕೃತ್ಯಗಳು 2:36).*